ಇಳ್ಕೊಳ್ಳಿ..'

'ಅಯ್ಯೋ.. ಹೀಗೆ ನಡುದಾರಿಯಲ್ಲಿ ನಮ್ಮನ್ನು ಬಿಟ್ಟರೆ ಹೇಗೆ.? ಹಾಗೆ ಮಾಡಬೇಡಿ.. ನಮಗೆ ಸಾಮಾನು ಹೇರಿಕೊಂಡು ಹಿಂದೆ ಬರಬೇಕು..' ಜಂಪಣ್ಣ ಕೈಮುಗಿದು ಆರ್ತನಾಗಿ ವಿನಂತಿಸಿದ.

'ಆಗಲ್ಲರೀ.. ಹೇಗೆ ಹೋಗೋದು..? ಇಲ್ಲಿಂದ ದಾರಿ ಬಂದ್ ಆಗಿದೆ.. ಯಾವ ಗಾಡೀನೂ ಮುಂದೆ ಹೋಗಲ್ಲ..' ಎಂದಾಗ ಇವರ ಎದೆ ಧಸಕ್ಕೆಂದಿತು.

'ಯಾಕೆ ಹೋಗಲ್ಲ..? ಏನಾಯಿತು ಅಂಥದ್ದು..?'

'ಇಲ್ಲಿನ ಮುಂದಿನ ಅಜ್ಜರಕಾಡಿನ ಸೇತುವೆ ಮುರಿದು ಬಿದ್ದಿದೆಯಂತೆ.. ಬ್ರಿಟಿಷರ ಕಾಲದ ಸೇತುವೆ ಅದು.. ಹಳೇದು.. ಈ ಜಡಿ ಮಳೆಗೆ ಕುಸಿದು ಬಿದ್ದಿದೆ.. ಇಲ್ಲಿಂದ ನಡ್ಕೊಂಡೇ ಹೋಗಿ..' ಎಂದ ಆತ. ಇಬ್ಬರೂ ಉಸಿರಾಡುವುದನ್ನೇ ಮರೆತವರಂತೆ ದಿಗ್ಭ್ರಾಂತರಾಗಿ ಕುಳಿತುಬಿಟ್ಟರು.

## ಅಧ್ಯಾಯ 13

'ಹ್ಞೂಂ.. ಇಳೀರಿ.. ಬೇಗ.. ಬಾಡಿಗೆಯೇನು ಕೊಡೋದು ಬೇಡಾ.. ಇಳೀರಿ..' ಎಂದು ಅವಸರಿಸಿದ. ಜಂಪಯ್ಯ ಮತ್ತು ಕಾಯ ವಿಧಿಯಿಲ್ಲದೇ ಅಸಹಾಯಕತೆಯಿಂದ ಕೆಳಗಿಳಿದರು. ಹೃದಯ ಅಪಶಂಕೆಯಿಂದ ವೇಗವಾಗಿ ಹೊಡೆದುಕೊಳ್ಳುತ್ತಿತ್ತು. ಸುರಿವ ಮಳೆಯಲ್ಲೇ ಸೇತುವೆಯ ಕಡೆಗೆ ವೇಗವಾಗಿ ದೌಡಾಯಿಸಿದರು. ಆಗಲೇ ಅಲ್ಲಿಗೆ ಆಗಮಿಸಿದ್ದ ಆರಕ್ಷಕರ ಪಡೆ, ಮುಂದೆ ಸವಾರಿ ಮಾಡದಂತೆ ರಸ್ತೆಗೆ ಅಡ್ಡವಾಗಿ ಎತ್ತರದ ಸೂಚನಾಫಲಕಗಳನ್ನು ಇರಿಸಲಾಗಿತ್ತು.

ಸೇತುವೆ ಪೂರ್ತಿಯಾಗಿ ಧರಾಶಾಯಿಯಾಗಿತ್ತು. ನಿತ್ಯ ಕಾಯನ ಕಣ್ಣಿಗೆ, ಮನಸ್ಸಿಗೆ ಏನೇನೋ ಹೊಸ ಹೊಳಹುಗಳನ್ನು ಹುಟ್ಟಿಸುವ ಸೇತುವೆ ತನ್ನ ಕತೆಯಿನ್ನು ಮುಗಿಯಿತೆಂಬಂತೆ ಸೋತು ಬಿದ್ದಿತ್ತು.

ಕಾಯ ಜಂಪಣ್ಣನನ್ನು ಬಿಟ್ಟು ಒಂದೇ ಉಸಿರಿಗೆ ಅತ್ತ ಓಡಿದ. ಯಾವುದೋ ಪೇದೆ ಓಡುವ ಇವನನ್ನು ಕಂಡು ಹಿಡಿದೆಳೆದ, 'ಎಲ್ಲಿಗೆ ಹೋಗ್ತಿದ್ಯಾ..? ಕಣ್ಣು ಕಾಣಿಸಲ್ವಾ..? ಎಲ್ಲ ಕಡೆ ನೀರು ನಿಂತಿದೆ..' ಕಾಯ ಅಸಹಾಯಕತೆಯಿಂದ ತಗ್ಗಿನಲ್ಲಿದ್ದ ಜಮೀನನ್ನು ನೋಡಿದ. ಅಜ್ಜರಕಾಡಿನ ತಗ್ಗೆಲ್ಲವೂ ಜಲಾವೃತವಾಗಿತ್ತು. ಸೇತುವೆಯೂ ಮುರಿದು ಬಿದ್ದು ನೀರು ಅತ್ತ ಹರಿದು ಹೋಗದೇ, ಇತ್ತ ಇದ್ದ ಜಮೀನನ್ನು ವ್ಯಾಪಿಸತೊಡಗಿತ್ತು. ಕಾಯನಿಗೆ ಹುಚ್ಚೇ ಹಿಡಿದಂತಾಗಿತ್ತು.

'ನನಗೆ ಹೋಗಲೇಬೇಕು ನನ್ನ ಹೆಂಡತಿ, ಮಗ ಅಲ್ಲಿ ಕೆಳಗೆ ಮನೇಲಿದ್ದಾರೆ..'

'ಅಲ್ಲಿ ಹೇಗೆ ಹೋಗ್ತೀರಾ.. ಕಣ್ಣು ಕಾಣ್ಸಲ್ವಾ..? ನೀರಿನ ಮಟ್ಟ ಮೇಲೇರ್ತಾ ಇದೆ.. ಹೋದ್ರೆ ನೀವೂ ಅಪಾಯಕ್ಕೆ ಸಿಕ್ಕಿ ಬೀಳ್ತೀರಾ..!' ಆ ಪೇದೆ ಎಚ್ಚರಿಸಿದ.

'ನನಗೆ ನನ್ನ ಪ್ರಾಣಕ್ಕಿಂತಲೂ ನನ್ನ ನಂಬಿದವರ ಪ್ರಾಣ ಮುಖ್ಯ.. ನಾನು ಹೋಗಲೇ ಬೇಕು..' ಕಾಯ ಅವರ ಹಿಡಿತದಿಂದ ಕೊಸರಾಡಿಕೊಂಡು ಮುನ್ನುಗ್ಗಿದ. ಜಂಪಯ್ಯ ಚೀರಿದ, 'ಬೇಡಾ ಕಾಯ ..ಹೋಗಬೇಡ..' ಎಂದರೂ ಕಾಯ ನಿಲ್ಲಲಿಲ್ಲ. ಏಕಾಏಕಿ ಒಮ್ಮೆಲೇ ಕೆರೆ ಕಟ್ಟಿ ನಿಂತಿದ್ದ ನೀರಿಗೆ ಧುಮುಕಿದ. ಉಳಿದವರು ಚೀರಿದರು. ಕಾಯ ಶಕ್ತಿ ಮೀರಿ ರಭಸದಿಂದ ಆ ನೀರಿನಲ್ಲಿ ತನ್ನ ಹೆಜ್ಜೆಗಳನ್ನು ಕಿತ್ತಿಡ ತೊಡಗಿದ.

ಕಾಲುಗಳು ಅಡಿಯಲ್ಲಿ ಹೂತು ಹೋಗುವಂತೆ ಭಾಸವಾಗುತ್ತಿದ್ದರೂ, ಅದನ್ನು ಮೀರಿ ಕಮಲಿ ಮತ್ತು ಪಾಂಡುವನ್ನು ರಕ್ಷಿಸಬೇಕೆಂಬ ತೀವ್ರತೆ ಅವನಲ್ಲಿ ಮನೋಬಲ ತುಂಬುತ್ತಿತ್ತು. ಅವನ ಹಿಂದೆ ಜಂಪಣ್ಣ ಕೂಡ ಸೇರಿಕೊಂಡ. ಮೇಲಿದ್ದ ಪೇದೆಗಳು ಸೀಟಿ ಊದಿ ಅವರನ್ನು ಕರೆಯುತ್ತಿದ್ದರೂ ಅದರತ್ತ ಗಮನ ಕೊಡದೇ ಕಾಯ ಮೈಯ್ಯಲ್ಲಿ ಏನೋ ಆವೇಶ ಬಂದವನಂತೆ ಮುನ್ನುಗ್ಗುತ್ತಿದ್ದ. ಮೇಲಿಂದ ಧಾರಾಕಾರ ಮಳೆ ಜಲಪ್ರಳಯವೇನೋ ಎನ್ನುವಂತೆ ಸುರಿಯ ತೊಡಗಿತ್ತು.

ಬೆಳಿಗ್ಗೆ ಅಲ್ಲಿಂದ ಹೊರಡುವಾಗ ಕಮಲಿ ಮತ್ತು ಪಾಂಡು ಬಾಗಿಲವರೆಗೂ ಬಂದು ಕೈ ಬೀಸಿ ಬೀಳ್ಕೊಟ್ಟ ದೃಶ್ಯ ಕಣ್ಮುಂದೆ ಸುಳಿದು, ಎದೆ ಸುಡುವ ಕುಲುಮೆಯಾಯಿತು.

'ಅದೇ ಶಾಶ್ವತ ಬೀಳ್ಕೊಡುಗೆಯೇ.. ಇಲ್ಲಾ.. ಅದಾಗಬಾರದು.. ಪಾಂಡು.. ಕಮಲಿ .. ನಾನು ಬರುತ್ತಿದ್ದೇನೆ..' ಅವನ ಹೃದಯ ಚೀರುತ್ತಿತ್ತು. ಪಾಂಡುವಿಗೆ ಖರೀದಿಸಿದ ಚಾಕಲೇಟು ಇನ್ನೂ ಕಿಸೆಯಲ್ಲಿದ್ದದ್ದನ್ನು, ಅ ಹೊತ್ತಿನಲ್ಲೂ ಭದ್ರವಾಗಿ ಒತ್ತಿ ಹಿಡಿದು ಮುನ್ನಡೆಯುವ ಪ್ರಯತ್ನ ಮಾಡಿದ. ಪಾದದಡಿಯಲ್ಲಿ ಯಾವುದೋ ಚೂಪು ವಸ್ತು ಚುಚ್ಚಿದಂತಾಗಿ ಅಷ್ಟೇ ವೇಗದಲ್ಲಿ ಕಾಲೆತ್ತಿದವನು, ಆಯಾ ತಪ್ಪಿ ವಾಲಿದ. ಸುಲಲಿತವಾಗ ಈಜುತ್ತಿದ್ದವನು ಇಂದು ಅಧೀರತೆಯಿಂದಲೋ, ಸುರಿವ ಮಳೆಗೋ ಸೋತಂತೆನಿಸಿತು. ನೀರಿನ ಸೆಳೆತ ಅವನನ್ನು ಸ್ವಲ್ಪ ಮುಂದಕ್ಕೆ ಸೆಳೆದೊಯ್ಯತೊಡಗಿತು. ಎದ್ದು ನಿಲ್ಲಲೂ ಆಗದೇ, ಈಜಲೂ ಆಗದೇ ತಿಣುಕಾಡಿದ. ಯಾವುದೋ ಮರದ ತನಕ ಅವನನ್ನು ನೀರು ಸೆಳೆದೊಯ್ದಾಗ ಆ ಮರವನ್ನೇ ಆಸರೆಗೆ ಹಿಡಿದು ನಿಂತ. ದೂರದಲ್ಲಿ ಜಂಪಯ್ಯ ಇವನನ್ನು ನೋಡಿ ಚೀರುತ್ತಲೇ ಇದ್ದ. 'ಹೋಗಬೇಡ ಕಾಯ.. ಕೆಳಗೆ ತಗ್ಗು ಜಾಗ.. ನೀರಿನ ಆಳ ಜಾಸ್ತಿ ಇದೆ..' ಅವನ ಮಾತು ಕೇಳುತ್ತಲೆ ಇತ್ತು. ಆದರೆ ಕಾಯನ ಮನದಲ್ಲಿದ್ದದ್ದು ಒಂದೇ..!

ಹಿಂದೆ ಕುಮುದಿನಿ ನದಿ ಸಮೀಪದಲ್ಲೇ ಇದೆ.. ಸೇತುವೆ ಒಡೆದಿದೆ.. ಅಲ್ಲೂ ನೆರ ಬಂದಿರಬಹುದು.. ಇಲ್ಲೇ ನೀರು ನಿಂತಿದ್ದರೆ ಅಲ್ಲೂ ಖಂಡಿತವಾಗಿ ಬಂದಿದೆ..! ಅಂದರೆ.. ಅಲ್ಲಿ ಕಮಲಿ, ಪಾಂಡು.. ಇತರೆ ನಿವಾಸಿಗಳ ಪಾಡೇನು..?!

'ಜಂಪಣ್ಣ.. ಅಲ್ಲಿ ಪಾಂಡು..ಕಮಲಿ..' ಕಾಯ ಚೀರಿದ. ಅವನಿಗೂ ಮಾತು ಹೊರಡಲಿಲ್ಲ. ಜಂಪಣ್ಣನ ಸೊಂಟಕ್ಕೂ ಮೇಲೆ ನೀರು ಏರಿತ್ತು. ಅವನ ಶಕ್ತಿಯೂ ಸಾಲದೇ ಸೋಲುವಂತಾಗಿತ್ತು. ಹೇಗೋ ನಿಧಾನವಾಗಿ ಒಂದೊಂದೇ ಹೆಜ್ಜೆಗಳಿಡುತ್ತ ಜಂಪಯ್ಯ ಕಾಯನನ್ನು ಸಮೀಪಿಸಿದ. ಕಾಯ ಅಳುತ್ತ, 'ಅಲ್ಲಿ ಕಮಲಿ.. ಪಾಂಡು..ಕತೆ ಏನು ಜಂಪಣ್ಣ..? ನಾವು ಇವತ್ತು ಮನೆ ಬಿಟ್ಟು ಬರಬಾರದಿತ್ತು..'

'ಹೀಗಾಗುತ್ತೆ ಅಂತ ಯಾರಿಗೆ ಗೊತ್ತಿತ್ತು ಕಾಯ..? ಹೀಗೆಂದೂ ಮೊದಲು ಅಗಿಲ್ಲ.. ನಮ್ಮ ಮನೆ ಕೃಷಿ ಎಲ್ಲಾ ಈ ನೀರು ಕೊಚ್ಚಿಕೊಂಡು ಹೋಯಿತು ಕಾಯ.. ನಾವು ಮುಳುಗಿ ಬಿಟ್ವೆವು.. ನಮ್ಮ ಬದುಕು ಮುಳುಗೇ ಹೋಯಿತು..' ಜಂಪಯ್ಯನ ಕಣ್ಣಿಂದ ಹರಿದ ಕಂಬನಿ ಮಳೆ ನೀರಿನೊಂದಿಗೆ ಸೇರಿ ಹೋಯಿತು. ಇಬ್ಬರೂ ಮರವನ್ನು ಬಲವಾಗಿ ಅಶ್ರಯಿಸಿ ಹಿಡಿದಿದ್ದರು.

'ಇಲ್ಲಿ ನಿಲ್ಲೋ ಹಾಗಿಲ್ಲ ಜಂಪಣ್ಣ.. ನಡಿ.. ಹೋಗೋಣ.. ಅಲ್ಲೇನು ಅವಸ್ಥೆ ನೋಡದೇ ನನಗೆ ಇಲ್ಲಿ ನಿಲ್ಲಲ್ಲು ಸಾಧ್ಯ ಇಲ್ಲ.. ನಾನು ಹೋಗಲೇ ಬೇಕು..' ಕಾಯ ಹೆಜ್ಜೆ ಕಿತ್ತಿಟ್ಟಾಗ ನೀರಿನ ರಭಸಕ್ಕೆ ವಾಲುತ್ತಲೇ ಜಂಪಣ್ಣ ಅವನನ್ನು ಹೋಗಗೊಡದೇ ಒಂದು ಕೈಯ್ಯಲ್ಲಿ ಬಲವಾಗಿ ಹಿಡಿದ, 'ಈ ಹುಚ್ಚುತನ ಬಿಡು.. ನಿನಗೆ ಅಷ್ಟು ದೂರ ತಲುಪಲು ಸಾಧ್ಯವಿಲ್ಲ.. ಮಳೆ ನಿಲ್ಲದೇ ಹೋಗುವ ಹಾಗಿಲ್ಲ..'

'ಈ ಮಳೆ ನನ್ನನು ತಡೆಯಲು ಸಾಧ್ಯವಿಲ್ಲ ಜಂಪಣ್ಣ.. ನಾನು ಹೋಗುವವನೇ..' ಕಾಯ ಚಡಪಡಿಸಿದರೂ ಏರುತ್ತಿದ್ದ ನೀರಿನ ಮಟ್ಟ, ನಿಲ್ಲದ ಮಳೆ ಇನ್ನು ಮುಂದುವರೆಯಲು ಸಾಧ್ಯವಿಲ್ಲವೆನ್ನುವ ಸತ್ಯ ಅವನ ಅಂತರಂಗಕ್ಕೆ ವೇದ್ಯವಾಗಿತ್ತು. ಮನಸ್ಸು ಅತ್ತ ಓಡಿದರೂ ಹೆಜ್ಜೆಗಳು ಅಸಹಾಯಕತೆಯಿಂದ ಅಲುಗಾಡದೇ ಹೋದವು.

'ಇದೆಂಥ ಅವಸ್ಥೆ ಬಂತೋ ಜಂಪಣ್ಣ.. ಎಲ್ಲಾ ಮೂರಾಬಟ್ಟೆಯಾಯಿತಲ್ಲ..' ಎಂದು ಕಾಯ ಆರ್ತವಾಗಿ ಪ್ರಲಾಪಿಸಿದ.

'ಮಳೆ ಈ ಜಾಗದಲ್ಲಲ್ಲ.. ನಮ್ಮ ಬದುಕಿನ ಮೇಲೆ ಸುರಿದಿದೆ.. ಎಲ್ಲಿಗೆ ಕೊಚ್ಚಿಕೊಂಡು ಹೋಗುತ್ತದೋ.. ತೇಲಿಸುತ್ತದೋ.. ಮುಳುಗಿಸುತ್ತದೋ..!' ಜಂಪಣ್ಣ ಗದ್ಗದನಾಗಿ ನುಡಿದ.

'ಮರ ಹತ್ತೋ ಕಾಯ.. ನೀರು ಏರುತ್ತಲೇ ಇದೆ.. ಕೆಳಗೆ ನಿಂತರೆ ಕೊಚ್ಚಿಕೊಂಡು ಹೋಗ್ತೇವೆ..'

'ಇನ್ನು ಉಳಿದಿರುವುದಾದರೂ ಏನು ಜಂಪಣ್ಣ.. ಹೋಗೋಣ ಬಿಡು..'

'ಈಗ ಅದೆಲ್ಲ ಮಾತನಾಡುವ ಸಮಯ ಅಲ್ಲ.. ಅವ್ರೆಲ್ಲಾ ಸುರಕ್ಷತೆಯಿಂದ ಇರಬಹುದು.. ಅಲ್ವಾ..?' ಜಂಪಣ್ಣ ನುಡಿದಾಗ ಕಾಯನ ಮನಸ್ಸಿಗೆ ಒಂದು ಸಣ್ಣ ಆಸೆ. ಹಾಗಾಗಲಿ ಎಂದೇ ಆಶಿಸಿದವನು , ಅದೇ ಭರವಸೆಯಲ್ಲಿ ಜಂಪಣ್ಣನ ಆಗ್ರಹಕ್ಕೆ ಮರವೇರ ತೊಡಗಿದ. ಅವನ ಹಿಂದೆಯೇ ಜಂಪಣ್ಣ ಕೂಡ ಹತ್ತಿ ಒಂದು ಕೊಂಬೆಯ ಮೇಲೆ ಕುಳಿತ. ಸಮಯ ಸರಿಯುತ್ತಿತ್ತು.

ಚಡಪಡಿಕೆ, ಉದ್ವೇಗ, ಆತಂಕ, ಭಯ..! ಮಿಶ್ರ ಭಾವನೆಗಳು.

ಜಿಗಿದು ಈಜಿ ಹೋಗಲೂ ಆಗದೇ, ಕುಳಿತಲ್ಲಿ ಕುಳಿತಿರಲೂ ಆಗದ ಹೇಳಲಸಾಧ್ಯವಾದಂಥ ಕ್ಲಿಷ್ಟಕರ ಪರಿಸ್ಥಿತಿ ... ಹೊತ್ತು ಸರಿಯುತ್ತಲೇ ಇತ್ತು. ಇವರು ನೋಡುತ್ತಿದ್ದಂತೇ ಜಾಕೇಟ್ ಗಳನ್ನು ತೊಟ್ಟ ಜೀವ ರಕ್ಷಕ ದಳದ ಸಿಬ್ಬಂಧಿಯೊಡನೆ, ಊರಿನ ಸ್ವಯಂಸೇವಕ ತಂಡ ಇವರಿದ್ದ ಮನೆಯ ಜಾಗದೆಡೆ ಹೋಗುತ್ತಿರವುದು ಕಂಡಿತು. ಜಂಪಣ್ಣ ಜೋರಾಗಿ ಅರಚಿ ಅವರ ಗಮನ ಸೆಳೆದು ಅವರನ್ನು ಸಹಾಯಕ್ಕಾಗಿ ಯಾಚಿಸಿದ.

ಇವರ ಆರ್ತ ಸ್ವರ ಕೇಳಿ ಅ ತಂಡ ಇವರ